ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡಗಳ ಪರಿಶೀಲನೆ

ಉಪಾಧ್ಯಕ್ಷರು.—ಈಗ ವಿಧೇಯಕವನ್ನು ಖಂಡಖಂಡವಾಗಿ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ವೇನೆಂದರೆ ;

"೨ರಿಂದ ೬ನೇ ಖಂಡಗಳು ವಿಧೇಯಕದ ಅಂಗಗಳು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(೨ರಿಂದ ೬ನೇ ಖಂಡಗಳು ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಮೊದಲನೆಯ ಖಂಡ ಇತ್ಯಾದಿ

ಉಪಾಧ್ಯಕ್ಷರು.—ಪ್ರಸ್ತಾಪವೇನೆಂದರೆ :

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗಗಳು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅನುಮೋದನಾ ಪ್ರಸ್ತಾವ

ಉಪಾಧ್ಯಕ್ಷರು.—ಈಗ ಮಂತ್ರಿಗಳು ಪ್ರಸ್ತಾವವನ್ನು ಮಂಡಿಸಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ಕರ್ನಾಟಕ ಬಳಕೆ ಉಪಯೋಗ ಮತ್ತು ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯು ಅನುಮೋದಿಸಂತ್ತದೆ.

ಉಪಾಧ್ಯಕ್ಷರು.—ಪ್ರಸ್ತಾಪವೇನೆಂದರೆ :

ಕರ್ನಾಟಕ ಬಳಕೆ, ಉಪಯೋಗ ಮತ್ತು ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕ ೧೯೮೩ನ್ನು ಅನುಮೋದಿಸುತ್ತದೆ.

(ಪ್ರಸ್ತಾವ ಅಂಗೀಕರಿಸಿ ವಿಧೇಯಕ ಅನುಮೋದಿಸಲ್ಪಟ್ಟಿತು.)

ಕರ್ನಾಟಕ ಮೋಟಾರ್ ವಾಹನ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩ ಪರಿಶೀಲನಾ ಪ್ರಸ್ತಾವ

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ರಾಜ್ಯ ಸಚಿವರು).—ಈ ಕೆಳಗೆ ಕಂಡ ವಿಧೇಯಕವನ್ನು ಸಭೆಯ ಪರಿಶೀಲನೆಗಾಗಿ ಮಂಡಿಸುತ್ತೇನೆ.

ಕರ್ನಾಟಕ ಮೋಟಾರ್ ವಾಹನ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩. ಪ್ರಸ್ತಾವನೆಯನ್ನು ಮಂಡಿಸಲಾಯಿತು.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, ೧೯೮೩-೮೪ನೇ ಸಾಲಿನ ಆಯವ್ಯಯದಲ್ಲಿ ಈ ರೀತಿಯ ತೆರಿಗೆ ರಿಯಾಯಿತಿ ಕೊಡಬೇಕೆಂಬ ಕಾರಣದಿಂದ ಯಾವುದೇ ತರಹದ ತೆರಿಗೆಯು ಬೇರೆ ಸರಕಾರಗಳ ಮೇಲೆ ಬೀಳದಿರುವುದರಿಂದ ಮತ್ತು ೧೫೦ ಲಕ್ಷ ರೂಪಾಯಿಗಳ ಹೆಚ್ಚಿನ ಹಣ ಬರುವುದರಿಂದ ಈ ವಿಧೇಯಕವನ್ನು ತಂದಿದ್ದೇವೆ. ಇದರಲ್ಲಿ ಮುಖ್ಯವಾಗಿರತಕ್ಕದ್ದು ೫ ವರ್ಷ ಮತ್ತು ೧೦ ವರ್ಷಗಳ ಅವಧಿಯಲ್ಲಿ ಒಂದೇ ಬಾರಿಗೆ ಹಣ ಕಟ್ಟತಕ್ಕ ಸವಲತ್ತು ಇರುವುದರಿಂದ ಅನೇಕ ಸಂದರ್ಭಗಳಲ್ಲಿ ಕೆಲವು ಮೋಟಾರು ವಾಹನಗಳ ಮಾಲೀಕರಿಗೆ ತೊಂದರೆಯಾಗಬಹುದು ; ಮತ್ತೆ ಕೆಲವರಿಗೆ ಕಟ್ಟುವುದಕ್ಕೆ ಅವಕಾಶವಾಗುತ್ತದೆಂದು ಈ ವಿಧೇಯಕವನ್ನು ತಂದಿದ್ದೇವೆ. ಇದನ್ನು ಯಾರಾದರೂ ೫ ವರ್ಷಕ್ಕೆ ಅಥವಾ ೧೦ ವರ್ಷಕ್ಕೆ ಕೊಡಬಹುದು.

ಶ್ರೀ ಕೆ. ಎಚ್. ರಂಗನಾಥ್.—೧೦ ವರ್ಷದ್ದನ್ನು ಒಟ್ಟಿಗೆ ಯಾರು ಕಟ್ಟುವುದಕ್ಕೆ ಹೋಗುತ್ತಾರೆ ?

ಶ್ರೀ ಎಂ. ಪಿ. ಪ್ರಕಾಶ್.—ಒಟ್ಟಿಗೆ ಕಟ್ಟಿದರೆ ಕನ್‌ಸೆಷನ್ ದೊರೆಯುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಯಾವ ಸಾರ್ವಜನಿಕರಿಂದಲಾದರೂ ಈ ರೀತಿ ಕನ್‌ಸೆಷನ್ ಕೊಡುವ ವ್ಯವಸ್ಥೆ ಮಾಡಿ ಎಂದು ಬೇಡಿಕೆ ಬಂದಿದೆಯೇ ? ಪ್ರೊ. ಗುಲಾಟಿಯವರು ಮೋಟಾರು ವೆಹಿಕಲ್ಸ್ ಟ್ಯಾಕ್ಸ್ ಸ್ಟ್ರಕ್ಚರನ್ನು ಯಾವ ರೀತಿ ಮಾಡಬೇಕು, ಯಾವ ರೀತಿ ಸುಧಾರಣೆ ಮಾಡಬೇಕೆಂಬ ಬಗ್ಗೆ ಹೇಳಿದ್ದಾರೆಯೆ ? ಹೇಗೆ ಹೆಚ್ಚು ಉತ್ಪನ್ನ ಬರುವಂತೆ ಪೂಡಬಹುದೆಂಬ ಬಗೆಗೆ ವಿಚಾರ ಮಾಡಲು ಸಲಹೆ ಕೊಡಲು ಒಂದು ಪರಿಣತರ ಸಮಿತಿಯೇ ಇದೆ ಅವರು ಈ ಬಗ್ಗೆ ಏನಾದರೂ ಹೇಳಿದ್ದಾರೆಯೇ ? ಎಲ್ಲಿಂದ ಸ್ಫೂರ್ತಿ ಬಂದು ತಕ್ಷಣ ಆಲೋಚನೆ ಮಾಡಿ ಈ ತೆರಿಗೆಯನ್ನು ಹಾಕಿದ್ದೀರಿ ? ವ್ಯವಹಾರಿಕವಾಗಿ ೫ ವರ್ಷ ಇರುವುದನ್ನು ೧೦ ವರ್ಷ ಎಂದು ಮಾಡುವುದಕ್ಕೆ ಎಲ್ಲಿಂದ ಸೂಚನೆ ಬಂತು ? ವಕೀಲರು ಏನಾದರೂ ಸಲಹೆ ಕೊಟ್ಟಿದ್ದಾರೆಯೆ ? ಇದಕ್ಕೆ ಜನಗಳ ಬೇಡಿಕೆ ಏನಾದರೂ ಇದೆಯೆ ? ಅಥವಾ ತಾವು ಒಮ್ಮೆಲೇ ೧೦ ವರ್ಷದ ಅಥವಾ ೫ ವರ್ಷದ ಸಂಪನ್ಮೂಲವನ್ನು ಪಡೆಯಬಹುದೆಂಬ ಆಲೋಚನೆ ಮಾಡಿರಬಹುದೆ ? ಯಾವುದೂ ನಮಗೆ ಗೊತ್ತಾಗುತ್ತಿಲ್ಲ ಏತಕ್ಕೆ ಈ ರೀತಿ ಅವ್ಯವಹಾರಿಕವಾಗಿ ಮಸೂದೆಯನ್ನು ತರಬೇಕು ?

ಶ್ರೀ ಎಂ. ಪಿ. ಪ್ರಕಾಶ್.—ಈಗ ಗುಲಾಟಿ ಆಯೋಗದಲ್ಲಿ ಇಂಥ ಸೂಚನೆ ಇಲ್ಲದಿರುವುದರಿಂದ ಇದನ್ನು ತರಬೇಕಾದ ಅಗತ್ಯ ಇಲ್ಲವೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಾರೆ. ಆದರೆ ನಮ್ಮ ಇಲಾಖೆ ಮೇಲೆ ಪದೇ ಪದೇ ಒಂದು ಆಪಾದನೆ ಏನಿದೆ ಎಂದರೆ, ಯಾವುದೇ ವಾಹನಗಳ ಮಾಲೀಕ ಪ್ರತಿಯೊಂದು ವರ್ಷ ಹೊಸ ತೆರಿಗೆ ಕೊಡತಕ್ಕ ಕಾಲದಲ್ಲಿ ಭ್ರಷ್ಟಾಚಾರಕ್ಕೆ ಈಡಾಗುತ್ತಾನೆ ಎಂದು. ಇಂಥ ಒಂದು ಸಂದರ್ಭದಲ್ಲಿ ದೂರುಗಳು ಬರುವುದರಿಂದ ಅವುಗಳನ್ನು ಸರಳಗೊಳಿಸುವುದಕ್ಕೆ ಯಾರಿಗೆ ಸಾಧ್ಯತೆ ಇದೆ ಅವರು ೫ ವರ್ಷಕ್ಕೆ ಅಥವಾ ೧೦ ವರ್ಷಕ್ಕೆ ಒಟ್ಟಿಗೆ ಕಟ್ಟಬಹುದು. ೫ ವರ್ಷದ ತೆರಿಗೆಯನ್ನು ಒಟ್ಟಿಗೆ ಕಟ್ಟುವವರಿಗೆ ೫ ಪರ್ಸೆಂಟ್ ಮತ್ತು ೧೦ ವರ್ಷದ್ದನ್ನು ಕಟ್ಟುವವರಿಗೆ ೧೦ ಪರ್ಸೆಂಟ್ ರಿಯಾಯಿತಿ ಇದೆ. ಸಾಮಾನ್ಯವಾಗಿ ೫ ವರ್ಷಕ್ಕೆ ಕಟ್ಟಲು ಸಾಧ್ಯತೆ ಇರುವುದರಿಂದ ಈ ಮಸೂದೆಯನ್ನು ತಂದಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನನಗೆ ಒಂದು ಸ್ಪಷ್ಟೀಕರಣ ಬೇಕು. ಫೈನಾನ್ಸಿಯಲ್ ಮೆಮೊರಾಂಡಂನಲ್ಲಿ ಏನು ಕಾಣಿಸಿದ್ದೀರಿ ಎಂದರೆ, ಒಂದು ವರ್ಷಕ್ಕೆ ಇದರಿಂದ ೧ ಕೋಟಿ ೫೦ ಲಕ್ಷ ರೂಪಾಯಿ ಆದಾಯ ಬರುತ್ತದೆ ಎಂದು. ಈಗ ವರ್ಷಕ್ಕೆ ವಾಹನ ತೆರಿಗೆಯಿಂದ ಬರತಕ್ಕ ಹಣ ಎಷ್ಟು ? ಒಂದು ಕೋಟಿ ೫೦ ಲಕ್ಷ ಎಂದು ಏನು ಹೇಳುತ್ತೀರಿ ಅದು ಹೆಚ್ಚುವರಿ ಹಣವೇ ? ಇದನ್ನು ಯಾವ ರೀತಿ ಜಸ್ಟಿಫೈ ಮಾಡುತ್ತೀರಿ ?

ಶ್ರೀ ಎಂ. ಪಿ. ಪ್ರಕಾಶ್.—ಈಗ ೫೦ಕ್ಕೆ ಬದಲಾಗಿ ೭೫ ರೂಪಾಯಿ ಎಂದು ಮಾಡಿರುವುದರಿಂದ ಹೆಚ್ಚು ವರಿಯಾಗಿ ಒಂದು ಕೋಟಿ ೫೦ ಲಕ್ಷ ರೂಪಾಯಿ ಬರುತ್ತದೆ.

ಶ್ರೀ ಹೆಚ್. ಗಂಗಾಧರನ್.—೧೦ ವರ್ಷ ತೆರಿಗೆಯನ್ನು ಒಟ್ಟಿಗೆ ಕಟ್ಟುವವರಿಗೆ ೧೦ ಪರ್ಸೆಂಟ್ ಮತ್ತು ೫ ವರ್ಷಕ್ಕೆ ೫ ಪರ್ಸೆಂಟ್ ರಿಬೇಟ್ ಕೊಡುತ್ತೇವೆಂದು ಬಡ್ಜೆಟ್ಟಿನಲ್ಲಿ ಹೇಳಿದ್ದೀರಿ. ಆದರೆ ಆದರ ಬಗ್ಗೆ ಈ ಮಸೂದೆಯಲ್ಲಿ ಯಾವ ಪ್ರಸ್ತಾವವೂ ಆಗಿಲ್ಲ. ಇದರಲ್ಲಿರತಕ್ಕ ಆನ್ಯುಯಲ್ ಪೇಮೆಂಟ್ ಎಂಬ ಪದವನ್ನು ತೆಗೆದು ೫ ವರ್ಷ ಅಥವಾ ೧೦ ವರ್ಷ ಎಂದು ಮಾಡಬೇಕೆಂದು ಇದೆ. ಇದರಲ್ಲಿ R.C. is deemed to be renewed ಎಂದು ಸೇರಿಸಿದ್ದರೆ ಚೆನ್ನಾಗಿತ್ತು.

4-30 P.M.

ಶ್ರೀ ಎಂ. ಪಿ. ಪ್ರಕಾಶ್.—ಮಸೂದೆಯಲ್ಲಿ ಅದಂ ಬರುವುದಿಲ್ಲ. ರಿನ್ಯೂಯಲ್ ಮಾಡತಕ್ಕದ್ದು ಪ್ರತ್ಯೇಕವಾಗುತ್ತದೆ. ಆದರೆ ರಿಬೇಟ್ ಕೊಡುವುದರ ಬಗ್ಗೆ "Provided also that notwithstanding anything in this sub-section such tax may be paid in advance in a lumpsum by such owner or person at his choice for a period of five years or tenyears within fifteen days from the commence ment of the first year of such period of five or ten years."

(ii) in sub-sec. (2) after the words "anual payments", the words "or payments for the period of five years or ten year's shall be inserted". ಎಂದು ಮಾಡಿದ್ದೇವೆ. ಆದರಲ್ಲಿ ಇದನ್ನು ಸೇರಿಸಿಕೊಳ್ಳುವುದಕ್ಕಾಗುತ್ತದೆ.

ಉಪಾಧ್ಯಕ್ಷರು.—ಪರಿಶೀಲನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯು ಪರಿಶೀಲಿಸಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಗಳ ಪರಿಶೀಲನೆ

ಎರಡರಿಂದ ಐದರವರಗಿನ ಖಂಡಗಳು

ಉಪಾಧ್ಯಕ್ಷರು.—ಈಗ ವಿಧೇಯಕವನ್ನು ಖಂಡಖಂಡವಾಗಿ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ ೨ ರಿಂದ ೫ರ, ಖಂಡಗಳು ವಿಧೇಯಕದ ಅಂಗಗಳು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(೨ ರಿಂದ ೫ನೇ ಖಂಡಗಳು ವಿಧೇಯಕಕ್ಕೆ ಸೇರಿಸಲ್ಪಟ್ಟವು.)

ಮೊದಲನೆಯ ಖಂಡ, ಇತ್ಯಾದಿ.

ಉಪಾಧ್ಯಕ್ಷರು.—"ಮೊದಲನೆಯ ಖಂಡ, ಹೆಸರು ಮತ್ತು ಆವತರಣಿಕೆಗಳು ವಿಧೇಯಕದ ಅಂಗಗಳು"

ಪ್ರಸ್ತಾಪ ಅಂಗೀಕರಿಲ್ಪಟ್ಟಿವು

(ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಗಿ ಸೇರಿಸಲ್ಪಟ್ಟವು.)

ಅನುಮೋದನಾ ಪ್ರಸ್ತಾಪ

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಈಗ ಪ್ರಸ್ತಾವವನ್ನು ಮಂಡಿಸಬಹುದು.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೆ, ಈ ಕೆಳಗೆ ಕಂಡ ಪ್ರಸ್ತಾವನೆಯನ್ನು ಸಭೆಯು ಅನುಮೋದಿಸುವುದು

ಕರ್ನಾಟಕರಾಜ್ಯದ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩.

ಉಪಾಧ್ಯಕ್ಷರು.—ಪ್ರಸ್ತಾಪ ಏನೆಂದರೆ.

ಕರ್ನಾಟಕ ರಾಜ್ಯದ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩ ಅನುಮೋದಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟು ವಿಧೇಯಕ ಅನುಮೋದಿಸಲ್ಪಟ್ಟಿತು.

ಕರ್ನಾಟಕ ರಾಜ್ಯ ಅರಣ್ಯ (ಎರಡನೇ ತಿದ್ದುಪಡಿ) ವಿಧೇಯಕ, ೧೯೮೩

ಪರಿಶೀಲನಾ ಪ್ರಸಾವ

ಶ್ರೀ ಬಿ. ಎ. ಜೀವಿಜಯ (ಅರಣ್ಯ ಖಾತೆ ರಾಜ್ಯ ಮಂತ್ರಿಗಳು).—ಅಧ್ಯಕ್ಷರೆ, ಕೆಳಗೆ ನಮೂದಿಸಿರುವ ವಿಧೇಯಕವನ್ನು ಸಭೆಯ ಪರಿಶೀಲನೆಗಾಗಿ ಮಂಡಿಸುತ್ತೇನೆ.

ಕರ್ನಾಟಕ ರಾಜ್ಯದ ಅರಣ್ಯ (ಎರಡನೇ ತಿದ್ದುಪಡಿ) ವಿಧೇಯಕ ೧೯೮೩.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಉಪಾಧ್ಯಕ್ಷರೇ, ಅರಣ್ಯ ತೆರಿಗೆ ಮೊದಲು ಶೇಕಡ ೮ ಇದ್ದುದನ್ನು ಈಗ ೧೫ಕ್ಕೆ ಹೆಚ್ಚಿಸಲಾಗಿದೆ. ಇದರ ಸಾಧಕಬಾಧಕಗಳನ್ನು ಯೋಚಿಸುವುದಾದರೆ ಇದು ಕೈಗಾರಿಕೆಗಳಿಗೆ ಕೊಡಲಾಗುತ್ತಿರುವ ಮರುಮುಟ್ಟುಗಳ ಮೇಲೆ ಈ ತೆರಿಗೆ ಬೀಳುತ್ತದೆ. ಕಾಗದ ಕಾರ್ಖಾನೆಗಳವರು ಏನು ಬಿದಿರು ತೆಗೆದುಕೊಳ್ಳುತ್ತಾರೆ ಅವರ ಮೇಲೆ. ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡುವ ಶ್ರೀಗಂಧದ ಮೇಲೆ ಮತ್ತು ಗಂಧದ ಕಾರ್ಖಾನೆಗಳಿಗೆ ಹಾಗೂ, ನೀಲಗಿರಿ ಮಾರಾಟದ ಮೇಲೆ ಈ ತೆರಿಗೆ ಬೀಳುತ್ತದೆ. ಸಣ್ಣ ಸಣ್ಣ ಗುಡಿ ಕೈಗಾರಿಕೆಗಳಿಗೆ, ಕುಶಲಕರ್ಮಿಗಳ ಮೇಲೆ. ಧಾರ್ಮಿಕ ಸಂಸ್ಥೆಗಳು ಮತ್ತು ಜನ ಉಪಯೋಗಿಸತಕ್ಕ ಕಟ್ಟಿಗೆಗೆ ಈ ತೆರಿಗೆ ಬೀಳುವುದಿಲ್ಲ. ಇದರಿಂದ ಸರ್ಕಾರಕ್ಕೆ ೧೯೫ ಲಕ್ಷ ರೂಪಾಯಿಗಳ ವರಮಾನ ಇದೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಉಪಾಧ್ಯಕ್ಷರೇ, ತೆರಿಗೆ ಹಾಕುವುದರ ಬಗ್ಗೆ ಮಾತನಾಡುವುದಕ್ಕಿಂತ ಪ್ರಮುಖವಾಗಿ ಇವತ್ತಿನ ದಿವಸ ಮರದ ವ್ಯಾಪಾರ ಸಾರ್ವಜನಿಕರ ಕೈಯಲ್ಲಿರುವುದರಿಂದ ಕಾಡನ್ನು ಆಡ್ಡಿಆತಂಕ ಇಲ್ಲದೆ ಕಡಿದು ಮಾರತಕ್ಕ ಪರಿಸ್ಥಿತಿಗೆ ನಾವು ತಲುಪಿದ್ದೇವೆ. ನನ್ನ ಅಭಿಪ್ರಾಯ ಇಡೀ ಮರದ ವ್ಯಾಪಾರವನ್ನು ಸರ್ಕಾರವೇ ತೆಗೆದುಕೊಳ್ಳುವುದು ಉತ್ತಮ ಎಂದು. ಇವತ್ತು ಏನಾಗಿದೆ, ಸರ್ಕಾರದವರು ಹರಾಜು ಹಾಕುತ್ತಾರೆ, ಹರಾಜಿನಲ್ಲಿ ಮರ ತೆಗೆದುಕೊಂಡು ಹೋದವನು ಅಂಗಡಿ ಇಟ್ಟುಕೊಂಡು ಮಾರಾಟ ಮಾಡುತ್ತಾನೆ. ಅದರ ಹೆಸರಿನಲ್ಲಿ ಸ್ಮಗ್ಲಿಂಗ್‌ಗೆ ಅವಕಾಶ ಆಗುವುದನ್ನು ನಾವು ನೋಡುತ್ತಿದ್ದೇವೆ. ಈ ಅಭಿವೃದ್ಧಿಗೆ ತೆರಿಗೆ ವಗೈರೆಗಳನ್ನು ಹಾಕುವ ಬದಲು ಇಡೀ ಕಟ್ಟಿಗೆ ವ್ಯಾಪಾರವನ್ನು ಸರ್ಕಾರವೇ ವಹಿಸಿಕೊಳ್ಳತಕ್ಕದ್ದು ಉತ್ತಮವೆಂದು ನಾನಾದರೂ